





ಸುರಗಿಯ ಸುಂದರ ಮಾಲೆ

ಪೂರ ಅರಳುವ ಮುಂಚೆಯೇ ಅದನ್ನು ಕಿತ್ತು ತಂದು ಬಾಳೆದಿಂಡಿನ ನಾರಿನಿಂದ ಸುರಿಯಬೇಕು (ಸುರಿಯುವುದು ಎಂದರೆ ಮಲೆನಾಡಿನಲ್ಲಿ ಪೋಣಿಸುವುದು). ಆ ದಂಡೆಯಂತೂ ಕಣ್ಣಿಗೆ ಹಬ್ಬ. ಹಳದಿ ಮುತ್ತು ಪೋಣಿಸಿದಂತಹ ದಂಡೆ. ಮೆಲ್ಲಗೆ ಮೊಗ್ಗೊಡೆದು ಹಳದಿ ಕೇಸರ ಆಚೆ ಕಾಣುವಾಗ ಅದರ ಸೊಗಸೇ ಬೇರೆ. ದಂಡೆಯನ್ನು ಜಡೆಗಿರಿಸಿದರೆ ಕೂದಲೆಲ್ಲ ಹಳದಿ ಹುಡಿ ಮೆತ್ತಿಕೊಳ್ಳುತ್ತಿತ್ತು. ಕೂದಲನ್ನೆಲ್ಲಾ ಅದ್ಭುತ ಪರಿಮಳ ಆವರಿಸಿಕೊಂಡುಬಿಡುತ್ತಿತ್ತು.

ಈ ಹೂವಿನ ದಂಡೆಯನ್ನು ನೆರಳಲ್ಲಿ ಒಣಗಿಸಿಯೂ ಬಳಸುತ್ತಾರೆ. ಮೊದಲು ದಂಡೆ ಮಾಡಿ ಅದನ್ನು ಹುಲ್ಲಿನ ಬಣವೆ ಮೇಲೆ ನೆರಳಲ್ಲೇ ಒಣಗಿಸಿಡುತ್ತಾರೆ. ವಾರಗಟ್ಟಲೆ ಶೇಖರಿಸಿಡಬಹುದಾದ ವಿಶಿಷ್ಟ ಬಗೆಯ ಹೂವಿದು. ನಮ್ಮ ಮನೆಗೆ ಸುರಗಿಯ ಸೀಸನ್‌ನಲ್ಲಿ ಬಹಳಷ್ಟು ಹೂವು ಸಿಗುತ್ತಿತ್ತು. ಹೂವನ್ನು ಒಣಗಿಸಿ, ಅಮ್ಮ ಶ್ರೀಗಂಧದ ಪೆಟ್ಟಿಗೆಯಲ್ಲಿ ಹಾಕಿಡುತ್ತಿದ್ದರು.

ಕಾರವಾರ, ಶಿರಸಿ, ಕುಮಟಾ ಕಡೆಯ ಹಲವು ಜನಾಂಗಗಳಲ್ಲಿ ಸುರಗಿ ಮಾಲೆಯನ್ನು ಮದುವೆಯಲ್ಲಿ ಹಾಕಲೇಬೇಕೆಂಬ ಶಾಸ್ತ್ರವಿದೆ. ಒಣಗಿದ ಸುರಗಿ ಹೂವಿನ ಮಾಲೆಯನ್ನು ಹಲವು ಜನಾಂಗದವರು ವಿವಿಧ ರೂಪದಲ್ಲಿ ಬಳಸುವ ಪದ್ಧತಿಯಿದೆ.

ಕುಂದಾಪುರ–ಉಡುಪಿ ತಾಲ್ಲೂಕುಗಳ ಸರಹದ್ದಿನಲ್ಲಿ ವಾಸಿಸುವ ಕುಡುಬಿ ಜನಾಂಗದವರು ಒಣಗಿದ ಸುರಗಿ ಹೂವನ್ನು ಹೋಳಿ ಹಬ್ಬದ ಸಮಯದಲ್ಲಿ ಉಪಯೋಗಿಸುವ ಪರಿ ವಿಶೇಷ. ಮಹಿಳೆಯರು ತಲೆಗೆ ಸುರಗಿ ಮಾಲೆ ಧರಿಸುತ್ತಾರೆ. ಪುರುಷರು ಹೋಳಿ ಕುಣಿತದ ದಿರಿಸಿಗಾಗಿ, ಒಣಗಿಸಿದ ಸುರಗಿ ಹೂವಿನ ಹತ್ತಾರು ಮಾಲೆಗಳನ್ನು ತಮ್ಮ ಅಲಂಕಾರಭರಿತ ಪೇಟದ ಸುತ್ತ ಸುತ್ತಿಕೊಳ್ಳುತ್ತಾರೆ. ಕೊರಳಿನ ಸುತ್ತಲೂ ಸುರಗಿ ಹೂಮಾಲೆಯನ್ನು ಕುಡುಬಿ ಯುವಕರು ತೊಡುತ್ತಾರೆ. ಅಂಥ ಸುರಗಿ ಮಾಲೆ ಮಾಡಲು ಒಂದೆರಡು ತಿಂಗಳ ಪರಿಶ್ರಮವಂತೂ ಇದ್ದೇ ಇರುತ್ತಿತ್ತು.

ಶಿವನಿಗೂ ಪ್ರೀತಿ ಪಾತ್ರವಾದ ಹೂವು ಸುರಗಿ ಎಂಬುದು ನಂಬಿಕೆ. 'ಸುರಗಿ'ಯ ಪರಿಮಳಕ್ಕೆ ಒಲಿಯದ ದೇವನಿಲ್ಲ!. ಸುರಗಿಯ ಗುಣಗಾನ ಮಾಡುವ ಜನಪದ ಗೀತೆಗಳೂ ಇವೆ. 'ಸುರಗಿ ಸುರ ಸಂಪಿಗೆ, ಕೋಲು ಕೋಲಣ್ಣ ಕೋಲೆ, ಜಂಬದಿಂದ ದಿಮ್ಮಿ ರಾಮ ಕೋಲನ್ನಾಡಿದ', 'ಸುರಕೊಂಡಿ ಸುರಗಿ ವೀರ' ಎಂಬ ಗೀತೆಗಳು ಜನಮಾನಸದಲ್ಲಿ ಸುರಗಿಯ ಕಂಪನ್ನು ಸದಾ ಸ್ಮರಿಸುವಂತೆ ಮಾಡಿವೆ.

ಕನ್ನಡದ ಪ್ರಸಿದ್ಧ ಸಾಹಿತಿ ಯು.ಆರ್. ಅನಂತಮೂರ್ತಿಯವರ ಮನೆ ಹಾಗೂ ಆತ್ಮಕಥನದ ಹೆಸರು ಕೂಡ 'ಸುರಗಿ'. ಹೂ ಬಾಡಿದ ಮೇಲೂ ತನ್ನ ದಿವ್ಯ ಸುಗಂಧ ಹರಡುವಂತೆ, ನಮ್ಮ ಕಾಲಾನಂತರವೂ ನಮ್ಮ ಸಾಹಿತ್ಯದ ಪರಿಮಳ ಹರಡಲಿ ಎಂಬ ಉದ್ದೇಶದಿಂದ 'ಸುರಗಿ' ಎಂಬ ಹೆಸರನ್ನು ಆಯ್ಕೆ ಮಾಡಿಕೊಂಡಿರುವುದಾಗಿ ಅನಂತಮೂರ್ತಿಯವರೇ ಹೇಳಿದ್ದರು.

ಸುರಗಿ ಹೂವಿನ ಪರಿಮಳದ ಲಾಭ ಬಿಟ್ಟರೆ, ಹೆಚ್ಚಿನ ಉಪಯೋಗದ ಬಗ್ಗೆ ನನಗೆ ಅರಿವಿಲ್ಲ. ನಿಧಾನವಾಗಿ ಬೆಳೆಯುವ ಪ್ರಭೇದದ ಸಸ್ಯವಾದ್ದರಿಂದ, ಸುರಗಿ ಮರಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಹೂವುಗಳನ್ನು ಅಲಂಕಾರಕ್ಕೆ ಬಳಸುವ ಪದ್ಧತಿಯೂ ಹಿನ್ನೆಲೆಗೆ ಸರಿಯುತ್ತಿರುವುದರಿಂದ, ಸುರಗಿ ಹೂವಿನ ಮಾಲೆ ಮಾಡುವ ಹವ್ಯಾಸ ಕ್ಷೀಣಿಸಿದೆ.

'ಸುರಗಿ ಕೊಟ್ಟವ್ವಾಗೆ ಎಲ್ಲಾ ಭಾಗ್ಯವೂ ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ, ಸುರಗಿಯ ಮುಡಿವ ಸೊಸೆ ಬರಲಿ' ಎಂಬ ಜನಪದರ ಹಾರೈಕೆಯಂತೆ ಸುರಗಿಯೂ, ಅದರ ಸುಗಂಧವೂ ಮನೆ–ಮನವನ್ನು ಸದಾ ಆವರಿಸಿರಲಿ ಎಂಬುದೇ ನನ್ನ ಆಶಯ.

ಪ್ರತಿಕ್ರಿಯಿಸಿ: feedback@sudha.co.in